ಹಾಗೇ ಅವನೊಳಗೆ ಪ್ರತಿಕ್ರಿಯೆ ತಯಾರಾಗ್ತಾ ಇದ್ದಿರಬೇಕು. ರಾವಣನ ಪಕ್ಷಪಾತಿಗಳು ರಾವಣ ಸೀತೆಯನ್ನು ಕದ್ದೊಯ್ಯಲು ಕಾರಣ ಅವನ ತಂಗಿಗಾದ ಅವಮಾನಕ್ಕೆ ಸೇಡು ತೀರಿಸಿಕೊಳ್ಳಲು ಅಂತ ಹೇಳ್ತಾರಲ್ವ... ಹಾಗಾಗಿ, ಹನುಮಂತ ಲಂಕೆಯನ್ನು ಯಾಕೆ ಸುಟ್ಟ...? ಸೀತೆಯನ್ನು ಯಾಕೆ ಕದ್ದೊಯ್ದ...? ಈ ಪ್ರಶ್ನೆಗಳ ಇನ್ನೊಂದು ಮುಖ ನೋಡಿದಾಗ ಒಂದೇ ಉತ್ತರ ಇದೆಯೇ? ಗೈಡ್ ಆದವನು ಯಾವಾಗಲೂ ತನ್ನ ತಲೆಯಲ್ಲಿಟ್ಟುಕೊಂಡಿರಬೇಕಾದ್ದು ಈ ರೀತಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಸಾಧ್ಯತೆಗಳನ್ನು. ಐತಿಹಾಸಿಕ ಸ್ಥಳಗಳಲ್ಲಿ ಗೈಡ್ ಆದವನು ಪ್ರವಾಸಿಗಳಿಗೆ ಮಾಹಿತಿ ಕೊಡುವಾಗ ಮೈ ಎಲ್ಲ ಎಚ್ಚರಿಕೆಯಿಂದಿರಬೇಕು. ಅದರಲ್ಲೂ ನಮ್ಮ ಹಂಪಿ, ಪುರಾಣ ಇತಿಹಾಸ ಎರಡೂ ಸೇರಿರುವ ಜಾಗ. ಇತಿಹಾಸದ ಸತ್ಯ ಕೆಲವೊಮ್ಮೆ ಕೇಳುವ ಕಿವಿಗಳಿಗೆ ಹಿತವಾಗಿರುವುದಿಲ್ಲ. ನೀವು ವಿಜಯನಗರದ ಉನ್ನತಿಯನ್ನು, ಇಲ್ಲಿಯ ರಾಜರು ದಂಡೆತ್ತಿ ಹೋಗಿದ್ದು..ಅವರ ಸಾಮ್ರಾಜ್ಯ ವಿಸ್ತರಣೆ ಎಲ್ಲ ಹೇಳುವಾಗ ಹೆಮ್ಮೆಯಿಂದ ಹೇಳಿ ಬಿಡಬಹುದು. ಆದರೆ, ಇಲ್ಲಿ ನಡೆದ ದಾಳಿಯ ಬಗ್ಗೆ, ವಿನಾಶದ ಬಗ್ಗೆ ಹೇಳುವಾಗ ಸೂಕ್ಷ್ಮವಾಗಿರಬೇಕು. ಗೈಡ್ ಅಂದ್ರೆ ಮಾರ್ಗದರ್ಶಿ. ನೀವು ತೋರಿಸುವ ಮಾರ್ಗ ಜನರೊಳಗೆ ದ್ವೇಷ ಹೆಚ್ಚಿಸಲೂಬಹುದು ಅಥವಾ ವಿವೇಚನೆ ಹೆಚ್ಚಿಸಲೂಬಹುದು. ನಾಲಿಗೆ ಹೊರಳ್ತಿದೆ ಅಂದುಕೊಂಡು ಇತಿಹಾಸಕ್ಕೆ ಅಪಚಾರ ಮಾಡ್ಬಾರ್ದು. ನನ್ನ ಶಿಷ್ಯರಾದವರು ಇದನ್ನು ಯಾವತ್ತು ನೆನಪಿಟ್ಟುಕೊಳ್ಳಿ...'

ಗುರುಗಳು ಹೇಳಿದ ಈ ಕಿವಿಮಾತನ್ನು ಅನುದಿನದ ನುಡಿಮುತ್ತಿನಂತೆ ಇಂದಿಗೂ ನೆನಪಿಸಿಕೊಳ್ಳುತ್ತಾ ಪಾಲಿಸುತ್ತಿದ್ದ ವೀರೇಶ ಅದೇ ನಿಷ್ಠೆಯಲ್ಲೇ ತನಗೆದುರಾಗುವ ಪ್ರವಾಸಿಗಳಿಗೆ ಗೈಡ್ ಮಾಡುತ್ತಿದ್ದ. ಇವತ್ತು ರಾತ್ರಿ ಗುರುಗಳನ್ನೊಮ್ಮೆ ಕಾಣಬೇಕು. ಯಾಕೋ ಏನೋ ತಪ್ಪಾಗುತ್ತಿದೆ ಅನಿಸಿತು. ತಲೆಗೊಂದು ಕುಟ್ಟ ಹಾಕಿಕೊಂಡ. ಅದು ಗುರುಗಳೇ ಹೇಳಿಕೊಟ್ಟದ್ದು ಅವನಿಗೆ. ಮಾಸದ ಮಚ್ಚೆಯಂತೆ ಅದಕ್ಕೂ ಒಂದು ಹಿನ್ನೆಲೆ ಇದೆ.

ಗೈಡ್ ವೃತ್ತಿ ಶುರು ಮಾಡಿದ ಮೊದಲ ವರ್ಷಗಳಲ್ಲಿ ಅವನು ಪ್ರವಾಸಿಗರ ಐತಿಹಾಸಿಕ ಕಲ್ಪನೆ ಆ ದಿನಗಳಿಗೇ ಹೋಗಿ ನಿಲ್ಲಬೇಕೆಂಬಂಥ ಹಾವಭಾವದಿಂದ ಚಿತ್ರಕ ವಿವರಣೆ ಕೊಡುತ್ತಿದ್ದ. ಹೆಚ್ಚಿನ ಪ್ರವಾಸಿಗರಿಗೂ ಅಷ್ಟೊಂದು ಸಮಯ, ತಾಳ್ಮೆ, ಆಸಕ್ತಿ ಇರುವುದಿಲ್ಲ ಎಂಬುದನ್ನು ವರ್ಷ ಕಳೆದಂತೆ ಅರ್ಥ ಮಾಡಿಕೊಂಡರೂ, ಐತಿಹಾಸಿಕ ಜಾಗಕ್ಕೆ ಬರುವವರು ಅದರ ಮೌಲ್ಯ ಅರ್ಥ ಮಾಡಿಕೊಳ್ಳುವಷ್ಟು ಸಮಯ ಕೊಡದಿರುವುದು ಅಪಚಾರ ಎಂದೇ ಅವನ ನಂಬಿಕೆ. ಆ ನಂಬಿಕೆಯನ್ನು ಅಲುಗಾಡಿಸುವಂಥ ಸಂದರ್ಭವೊಂದು ಎದುರಾಗಿತ್ತು. ವರ್ಷಗಳ ಹಿಂದೆ ಹುಡುಗಿಯರ ಗುಂಪೊಂದು ಬಂದಿತ್ತು. ಆತ ವಿವರಿಸುವಾಗ ನಡುವೆ ಹುಡುಗಿಯೊಬ್ಬಳು ಗೆಳತಿ ಜೊತೆ ಪೋಕ್ರಿತನ ಮಾಡುತ್ತಿದ್ದಳು. 'ಇದನ್ನೆಲ್ಲ ತಿಳ್ಕೊಬೇಕು ಮೇಡಂ. ನಮ್ಮ ನಾಡಿನ ಪರಂಪರೆ. ಆ ಕಾಲದಲ್ಲಿ ಇದನ್ನೆಲ್ಲ ನಿರ್ಮಾಣ ಮಾಡಿದಾರಲ್ಲ. ಅವರ ಕುಶಲತೆ ಹೇಗಿತ್ತು ನೋಡಿ' ಅಂದುಬಿಟ್ಟದ್ದ.

'ನೀವ್ಯಾಕೆ ನಿಮ್ಮ ಅಭಿಪ್ರಾಯ ನಮ್ಮ ತಲೆ ಮೇಲೆ ಹೊರಿಸ್ತೀರಿ ಸರ್? ಅವತ್ತು ಅವರ ಜೀವನಕ್ಕೆ ಅಗತ್ಯ ಇದ್ದಿದ್ದನ್ನ ಅವರು ಮಾಡಿಕೊಂಡ್ರು. ಅವತ್ತಿಗೆ ಇದು ಜೀವನ. ಇವತ್ತಿಗಿದು ಪಳೆಯುಳಿಕೆ ಅಷ್ಟೇ ಅಲ್ವಾ? ಇವತ್ತು ನಮ್ಮ ಕಾಲಕ್ಕೆ ಏನು ಬೇಕೋ ಅದನ್ನ ನಾವೂ ಮಾಡ್ತಾ ಇಲ್ವಾ. ಅದೇ ಥರಾ ಇದು. ಅಷ್ಟೇ ಸರ್' ಅಂದುಬಿಟ್ಟದ್ದಳು. ಇಷ್ಟು ಮಹತ್ತಿನ ವಿಚಾರವನ್ನು ಹೀಗೆ ತಳ್ಳಿ ಬಿಡುತ್ತಾರಲ್ಲ ಈ ಮಕ್ಕಳು ಅನಿಸಿ ನೊಂದುಕೊಂಡಿದ್ದ. ತನ್ನ ಅನುದಿನದ ಗುರು ಸದಾನಂದ ಮೂರ್ತಿಯವರ ಬಳಿ ಇದನ್ನು ಹೇಳಿಕೊಂಡಾಗ ಅವರು ಬಹಳ ಹೊತ್ತು ಮೌನವಾಗಿದ್ದರು. ನಂತರ 'ಅವಳು ಹೇಳಿದ್ದು ತಪ್ಪಲ್ಲ. ಹಾಗಂತ ಅದು ಸರಿಯೂ ಅಲ್ಲ ಬಿಡು' ಅಂದು ಬಿಟ್ಟದ್ದರು. 'ತಲೆಗೆ ಹುಳ ಬಿಟ್ಟಂತೆ ಹೇಳಿದಿರಲ್ಲ ಗುರುಗಳೇ' ಅಂದಿದ್ದ. 'ತಲೆಗೆ ಕುಟ್ಟ ಹಾಕಿಕೊ. ಹುಳ ಹೊರ ಬೀಳುತ್ತೆ' ಅಂದಿದ್ದರು. ನಂತರ ಅವನ ಭುಜ ತಟ್ಟಿ ಕೆಲವು ಭ್ರಮೆಗಳನ್ನು ಕಳಚಿಕೊಬೇಕು ವೀರೇಶ. ಅದಕ್ಕಾಗಿ ನಮಗೆ ನಾವೇ ಕುಟ್ಟ ಹಾಕ್ಕೊಬೇಕು ಅನ್ನುತ್ತಾ ಕಣ್ಣಿಗೆ ಕಣ್ಣು ಸೇರಿಸಿದ್ದರು. ಒಂದಷ್ಟು ದಿನ ಅವನು ಅದೇ ಜಿಜ್ಞಾಸೆಯಲ್ಲಿದ್ದ. ಮತ್ತಷ್ಟು ದಿನ ಕಳೆಯುತ್ತಿದ್ದಂತೆ, 'ಅದು ಸರಿ ಅಲ್ಲ. ಹುಡುಗಿ ಉಡಾಫೆ